| |
|---|
| Form No.4 (Civil)<br>Deposition<br>Sheets<br>(R.P.No.57) |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 2/2014

ಫ್ರಾ.ಸಾ. 9 ಚಾ.ಸಾ. 19

| | | |
|---|---|---|
| ಹೆಸರು | : | ಜೆ ಹೆಚ್ ಇನಾಮದಾರ |
| ತಂದೆಯ ಹೆಸರು | : | ಹುಸೇನ ಸಾಬ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಡಿ ವೈ ಎಸ್ ಪಿ ಲೋಕಾಯುಕ್ತ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 23-08-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಸೆಪ್ಟೆಂಬರ್ 2009 ರಿಂದ ಜೂನ್ 2011 ರವರೆಗೆ ನಾನು ಪಿಐ ಆಗಿ ಕರ್ನಾಟಕ ಲೋಕಾಯುಕ್ತ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 27.10.2010 ರಂದು ನಾನು ಠಾಣೆಯಲ್ಲಿದ್ದಾಗ ಈ ಪ್ರಕರಣದ ದೂರುದಾರ ಶಿವಶಂಕರ ಇವರು ಹಾಜರಾಗಿ ತಮ್ಮ ಹಸನಾಪೂರ ಗ್ರಾಮದ ಸರ್ವೆ ಸಂ: 46/1/2 ರಲ್ಲಿನ ಜಮೀನಿಗೆ ಸಂಬಂಧಿಸಿದ ಭೂಪರಿವರ್ತನೆಗೆ ರೂ. 25000/- ಹಣದ ಬೇಡಿಕೆಯನ್ನು ಎ ಸಿ ಕಚೇರಿಯಲ್ಲಿ ಮ್ಯಾನೇಜರ ಆಗಿದ್ದ 1ನೇ ಆರೋಪಿ ಮೃತ ಗುರುಪಾದ ಪಾಟೀಲ್ ಇವರು ಇಟ್ಟಿದ್ದರ ಬಗ್ಗೆ ತಿಳಿಸಿದ್ದು ನಾನು ಅವರಿಗೆ ಒಂದು ಸೋನಿ ವೈಸ ರಿಕಾರ್ಡರನ್ನು ಕೊಟ್ಟು ಪುನಃ 1ನೇ ಆರೋಪಿಗೆ ಬೇಟಿ ಮಾಡಿ ಅವರು ಲಂಚದ ಹಣದ ಬೇಡಿಕೆ ಇಟ್ಟಿದ್ದನ್ನು ಅದರಲ್ಲಿ ದಾಖಲಿಸಿಕೊಳ್ಳಲು ತಿಳಿಸಿ ಕಳುಹಿಸಿಕೊಟ್ಟೆ.

3. ದಿ: 30.10.2010 ರಂದು ಫಿರ್ಯಾದಿ ಶಿವಶಂಕರ ಇವರು ನಾನು ಚೂಚಿಸಿದಂತೆ 1ನೇ ಆರೋಪಿಯನ್ನು ಬೇಟಿ ಮಾಡಿದ್ದು ಅವರು ಹಸನಾಪೂರ ಗ್ರಾಮದ ಗಾಮ ಲೆಕ್ಕಿಗರಾದ 2ನೇ ಆರೋಪಿ ಸಿದ್ದಯ್ಯ ಸ್ವಾಮಿಯನ್ನು ಬೇಟಿ ಆಗುವಂತೆ ತಿಳಿಸಿದ್ದು, ಅದರಂತೆ ದೂರುದಾರ 2ನೇ ಆರೋಪಿಯನ್ನು ಬೇಟಿ ಮಾಡಿ ಮಾತನಾಡಿಸಿದ್ದು, ಅವರು ನನ್ನ ಕೆಲಸ ಆಗಬೇಕಾದರೆ 1ನೇ

ಆರೋಪಿಗೆ ರೂ. 30000/- ಹಣ ನೀಡಬೇಕೆಂದು ತಿಳಿಸಿದ್ದು, ಅದಕ್ಕೆ ದೂರುದಾರ ರೂ. 25000/- ನೀಡುತ್ತೇನೆ ಅಂತಾ ಹೇಳಿದ್ದು, ಅದನ್ನು ವೈಸ್ ರಿಕಾರ್ಡರನಲ್ಲಿ ದಾಖಲಿಸಿಕೊಂಡು, ತನ್ನ ಸ್ವ ಲಿಖಿತ ದೂರನ್ನು ತಂದು ಹಾಜರುಪಡಿಸಿದ್ದು ಅದರಂತೆ ನಾನು ನಮ್ಮ ಠಾಣಾ ಗುನ್ನ ಸಂಃ 6/2010 ನ್ನು ದಾಖಲಿಸಿಕೊಂಡು ಪ್ರ.ವ.ವನ್ನು ಚಾಸಾ-6 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಕಳುಹಿಸಿಕೊಟೆನು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲ್ಲಿರುವ ಹಿಂಬರಹದಲ್ಲಿರುವ ಸಹಿಯನ್ನು ನಿಪಿ-1(ಬಿ) ಎಂದು, ಕಡತದಲ್ಲಿನ ಪ್ರ.ವ.ವನ್ನು ನಿಪಿ-33 ಎಂದು ಸಾಕ್ಷಿಯ ಸಹಿಯುನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ನಾನು ಮುಖ್ಯ ಗುರುಗಳು, ಸರ್ಕಾರಿ ಶಾಲೆ, ಕೋಳಿವಾಡ ರವರಿಗೆ ಮತ್ತು ಮುಖ್ಯ ಗುರುಗಳು ಹಿ.ಪ್ರಾ. ಶಾಲೆ ಬೋವಿವಾಡ ರವರಿಗೆ ಕೋರಿಕೆ ಸಲ್ಲಿಸಿ ತಲಾ ಒಬ್ಬರು ಪಂಚರನ್ನು ಕಳುಹಿಸಿಕೊಂಡುವಂತೆ ಕೋರಿದೆನು. ಅದರಂತೆ ಚಾಸಾ-2 ಮತ್ತು 3 ಸಹ ಶಿಕ್ಷಕರನ್ನು ನೇಮಿಸಿ ನಿಯೋಜಿಸಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ನಿಪಿ-28 ಮತ್ತು 29 ಎರಡು ದಿಃ 30.10.2010 ರ ಕೋರಿಕೆಗಳನ್ನು ತೋರಿಸಿ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಯುನ್ನು ನಿಪಿ-28(ಎ) ಮತ್ತು ನಿಪಿ-29(ಎ) ಎಂದು ಗುರುತಿಸಲಾಯಿತು.

5. ನಂತರ ಅದೇ ದಿನ ಬೆಃ 10.30 ಕ್ಕೆ ನಾನು ಫಿರ್ಯಾದಿ ಮತ್ತು ಪಂಚರನ್ನು ಪರಸ್ಪರ ಪರಿಚಯಮಾಡಿಕೊಟ್ಟೆನು. ಲಿಖಿತ ದೂರನ್ನು ಪಂಚರಿಗೆ ಓದಲು ನೀಡಿದೆನು. ನಂತರ ಫಿರ್ಯಾದಿ ಹಾಜರು ಪಡಿಸಿದ ವೈಸ್ ರಿರ್ಕಾಡರನ್ನು ಚಾಲು ಮಾಡಿ ಕೇಳಿಸಿದ್ದು, ಅದರಲ್ಲಿ ಇಬ್ಬರು ವ್ಯಕ್ತಿಗಳ ಸಂಭಾಷಣೆ ಪ್ರತ್ಯೇಕ ಇದ್ದು, ಸದರಿ ಸಂಭಾಷಣೆಯನ್ನು ನಮ್ಮ ಸಿಬ್ಬಂಧಿ ಸಹಾಯಹದಿಂದ 2 ಪ್ರತ್ಯೇಕ ಪ್ರತಿಲೇಖನಗಳನ್ನು ನಿಪಿ-24 ಮತ್ತು 26 ರಂತೆ ತಯಾರಿಸಿರುತ್ತೇವೆ. ಅವುಗಳ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-24(ಸಿ) ಮತ್ತು 26(ಸಿ) ಎಂದು ಗುರುತಿಸಲಾಯಿತು. ದೂರಿನ ವಿಚಾರವನ್ನು ತಿಳಿದುಕೊಂಡ ಪಂಚರು ಪಂಚನಾಮೆಗೆ ಸಹಕರಿಸಲು ಒಪ್ಪಿದ್ದು. ನಂತರ ಫಿರ್ಯಾದಿಗೆ ತನ್ನ ಬಳಿ ಇದ್ದ ರೂ. 1000 ಮುಖ ಬೆಲೆಯ 25 ನೋಟುಗಳನ್ನು ಲಂಚದ ಹಣ ಎಂದು ಹಾಜರುಪಡಿಸಿದರು. ನಂತರ ನಾನು ಪಂಚ ಶ್ರೀ ಬಾಬುರಾವ ರವರಿಗೆ ನೀಡಿ ಪರಿಶೀಲಿಸಿ ಅವುಗಳ ಮೌಲ್ಯ ಮತ್ತು ನಂಬರುಗಳನ್ನು ತಿಳಿಸಲು ಕೇಳಿಕೊಂಡಾಗ ಅವರು ಪರಿಶೀಲಿಸಿ ಹೇಳಿದಂತೆ ಇನ್ನೊಬ್ಬ ಪಂಚ ಸಾಕ್ಷಿ ಶ್ರೀ ಸಂಜಿವರವರು ಒಂದು ಪ್ರತ್ಯೇಕ ಹಾಳೆಯಲ್ಲಿ ಬರೆದು ಕೊಡಲು ತಿಳಿಸಿದೆ. ಅದರಂತೆ ಅವರು ಪರಿಶೀಲಿಸಿ ಬರೆದುಕೊಂಡರು.

ಸದರಿ ಹಾಳೆಗೆ ಪಂಚರು ಮತ್ತು ನಾನು ಸಹಿ ಮಾಡಿದ್ದೇನೆ. ಸಾಕ್ಷಿಗೆ ನಿಪಿ-23 ತೋರಿಸಿ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-23(ಸಿ) ಎಂದು ಗುರುತಿಸಲಾಯಿತು.

6. ನಂತರ ನಮ್ಮ ಕಛೇರಿಯಲ್ಲಿದ್ದ ಎರಡು ಚಿಕ್ಕ ಬಿಳಿ ಪ್ಲಾಸ್ಟಿಕ್ ಡಬ್ಬಿಗಳನ್ನು ಪಂಚರಿಗೆ ತೋರಿಸಿ ಒಂದು ಡಬ್ಬಿಯಲ್ಲಿದ್ದ ಪೌಡರ್‌ನ್ನು ಇದು ಫಿನಾಪ್ತಲೀನ್ ಪೌಡರ್ ಮತ್ತು ಇನ್ನೊಂದು ಡಬ್ಬಿಯಲ್ಲಿದ್ದ ಪೌಡರ್‌ನ್ನು ತೋರಿಸಿದೆ. ಫಿನಾಪ್ತಲಿನ ಪೌಡರನ್ನು ಲಂಚದ ಹಣದ ನೋಟುಗಳಿಗೆ ಹಚ್ಚುವುದಾಗಿ ಹೇಳಿ, ಸೋಡಿಯಂ ಕಾರ್ಬೊನೇಟ್ ಪೌಡರ್ ಇದನ್ನು ಶುದ್ಧವಾದ ನೀರಿನೊಂದಿಗೆ ಬೆರೆಸಿ ದ್ರಾವಣ ತಯಾರಿಸಲು ಬಳಸುವುದಾಗಿ ಹಾಗೂ ಒಂದು ಬಾಟಲಿಯನ್ನು ತೋರಿಸಿ ಇದರಲ್ಲಿ ಶುದ್ಧ ನೀರು ಇರುತ್ತದೆ ಅದನ್ನು ದ್ರಾವಣ ತಯಾರಿಸಲು ಬಳಸುವುದಾಗಿ ಮನವರಿಕೆ ಮಾಡಿಕೊಟ್ಟೆನು.

7. ನಂತರ ನಮ್ಮ ಸಿಬ್ಬಂದಿ ಪಿ.ಸಿ ಕಾಶಿನಾಥ ರವರ ಮುಖಾಂತರ ಸದರಿ 1000/-ರೂ. ಮೌಲ್ಯದ 25 ನೋಟುಗಳ ಎರಡು ಬದಿಗೆ ತೆಳುವಾಗಿ ಫಿನಾಪ್ತಲೀನ್ ಪೌಡರನ್ನು ಸವರಿಸಿ ಪಂಚಸಾಕ್ಷಿ ಬಾಬುರಾವ ರವರ ಕೈಯಲ್ಲಿ ಕೊಡಲು, ನಾನು ತಿಳಿಸಿದಂತೆ ಪಿ.ಸಿ ಕಾಶಿನಾಥ ರವರು ಅವರ ಕೈಗೆ ಕೊಟ್ಟರು ಅವರು ನನ್ನ ಸೂಚನೆಯಂತೆ ಸದರಿ ನೋಟುಗಳನ್ನು ತಮ್ಮ ಎರಡು ಕೈಗಳಿಂದ ಎಣಿಸಿ ಫಿರ್ಯಾದಿದಾರನು ಧರಿಸಿದ ಪ್ಯಾಂಟಿನ ಬಲಗಡೆ ಜೇಬನ್ನು ಶೋಧಿಸಿ ಅದರಲ್ಲಿ ಬೇರೆ ಯಾವುದೇ ಹಣ ಅಥವಾ ಕಾಗದಗಳಿಲ್ಲವೆಂದು ಖಾತ್ರಿಪಡಿಸಿಕೊಂಡು ಆ ಜೇಬಿನಲ್ಲಿ ಕೊಡಬೇಕಾದ ಲಂಚದ ಹಣ ಇಟ್ಟರು.

8. ನಾನು ಒಂದು ಸ್ವಚ್ಛವಾದ ಗಾಜಿನ ಬಟ್ಟಲಲ್ಲಿ ತಮ್ಮ ಸಿಬ್ಬಂದಿಯವರಾದ ಹೆಚ್.ಸಿ ಶ್ರೀನಿವಾಸ ರವರಿಂದ ಶುದ್ಧ ನೀರನ್ನು ಹಾಕಿಸಿ ಅದರಲ್ಲಿ ಸೋಡಿಯಂ ಕಾರ್ಬೋನೆಟ್ ಪುಡಿ ಬೆರೆಸಿ ದ್ರಾವಣ ತಯಾರಿಸಿದರು. ಅದು ಬಣ್ಣ ರಹಿತವಾಗಿತ್ತು. ಅದರಲ್ಲಿ ಪಂಚರಾದ ಬಾಬುರಾವ ರವರ ಎರಡೂ ಕೈ ಬೆರಳುಗಳನ್ನು ಅದ್ದಿ ತೊಳೆಯಿಸಲಾಗಿ ಬಣ್ಣ ರಹಿತವಾಗಿದ್ದ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಖಾಲಿ ಗಾಜಿನ ಬಾಟಲಿಯಲ್ಲಿ ಹಾಕಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ, ದಾರದಿಂದ ಕಟ್ಟಿ "D.S" ಎಂಬ ಇಂಗ್ಲೀಷ್ ಅಕ್ಷರಗಳುಳ್ಳ ಮೊಹರಿನಿಂದ ಸೀಲ್ ಮಾಡಿ ಪಂಚರ ಸಮಕ್ಷಮ ಸಹಿ ಪಡೆದು ಆರ್ಟಿಕಲ್ ನಂ. 1 ಅಂತಾ ಗುರ್ತಿಸಿದೆವು. ಸದರಿ ಗಾಜಿನ ಬಾಟಲಿ ಈಗಾಗಲೇ ಮುಮಾ-1 ಎಂ ದು ಗುರುತಿಸಲ್ಪಟ್ಟಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ.

9. ಆ ನಂತರ ನಾನು ಫಿರ್ಯಾದಿದಾರನಿಗೆ ಮತ್ತು ಪಂಚರಿಗೆ ಒಂದು ವೇಳೆ ಆರೋಪಿತ ನೌಕರನು ಲಂಚದ ಹಣ ಈ 25,000/-ರೂ ಗಳನ್ನು ಕೇಳಿ ಪಡೆದಿದ್ದೇ ಆದರೆ ಅವನ ಕೈ ಬೆರಳುಗಳನ್ನು ಸಹ ಇದೇ ರೀತಿಯಲ್ಲಿ ತಯಾರಿಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಿಸಿದಾಗ ಬಣ್ಣ ರಹಿತವಾದ ದ್ರಾವಣ ಇದೇ ರೀತಿ ತಿಳಿ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಅಂತಾ ತಿಳುವಳಿಕೆ ನೀಡಿದೆ.

10. ನಾನು ಫಿರ್ಯಾದಿದಾರನ ಜೊತೆ ಚಾಸಾ-2 ಸಂಜೀವ ಇತನಿಗೆ ನೆರಳು ಸಾಕ್ಷಿ ಇರುವಂತೆ ಸೂಚಿಸಿದ್ದು ಹಾಗೂ ಫಿರ್ಯಾದಿದಾರನಿಗೆ ವೈಸ ರಿಕಾರ್ಡರನ್ನು ಕೊಟ್ಟು ಸರ್ಕಾರಿ ನೌಕರನು ಕಲೇಳಿದಾಗ ಮಾತ್ರ ಸದರಿ ಲಂಚದ ಹಣ ರೂ 25,000/- ಗಳನ್ನು ನೀಡಬೇಕು ಎಂದು ಅಥವಾ ಒಂದು ವೇಳೆ ಆರೋಪಿತ ನೌಕರನು ಲಂಚದ ಹಣವೆಂದು ಕ್ಷೇಳಿ ಬೇರೆಯವರ ಕೈಗೆ ಹಣ ಕೊಡುವಂತೆ ಹೇಳಿದಾಗ ಅಥವಾ ಬೇರೆ ಯಾವುದೇ ಸ್ಥಳದಲ್ಲಿ ಇಟ್ಟು ಹೋಗಲು ತಿಳಿಸಿದಾಗ ಮಾತ್ರ ಅವನು ಹೇಳಿದಂತೆ ಹಣವನ್ನು ಕೊಟ್ಟು ಆ ಸಮಯದಲ್ಲಿ ವೈಸ ರಿಕಾರ್ಡರನಲ್ಲಿ ರೆಕಾರ್ಡ ಮಾಡಿಕೊಳ್ಳಲು ಹಾಗೂ ಹಣ ಪಡೆದುಕೊಂಡ ನಂತರ ಸ್ಥಳದಿಂದ ಹೊರಗಡೆ ಬಂದು ಅಲ್ಲಿ ಹೊರಗಡೆ ಕಾಯುವ ನಮಗೆ ಮುಖದ ದಾಡಿಯ (ಗಡ್ಡ) ಮೇಲೆ ಎರಡು ಬಾರಿ ಕೈಯನ್ನು ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಲು ತಿಳಿಸಿದೆನು. ಆ ನಂತರ ನಾನು ಪಂಚರಾದ ಶ್ರೀ ಸಂಜೀವ ಇವರಿಗೆ ಫಿರ್ಯಾದಿ ಮತ್ತು ಸರ್ಕಾರಿ ನೌಕರನ ಮಧ್ಯ ನಡೆಯುವ ಸಂಭಾಷಣೆಯನ್ನು ಕೇಳಿ ಹಣ ಪಡೆಯುವುದನ್ನು ನೋಡಿ ಆ ನಂತರ ಕೇಳಿದಾಗ ತಿಳಿಸುವಂತೆ ಸೂಕ್ತ ತಿಳುವಳಿಕೆ ನೀಡಿದೆನು.

11. ನಾನು, ಪಂಚರು ಮತ್ತು ಫಿರ್ಯಾದಿ ಹಾಗೂ ಸಿಬ್ಬಂದಿಯವರೆಲ್ಲರೂ ನಮ್ಮ ನಮ್ಮ ಕೈಗಳನ್ನು ಸಾಬೂನಿನಿಂದ ಸ್ವಚ್ಛವಾಗಿ ತೊಳೆದುಕೊಂಡೆವು, ನಂತರ ಕೇಸಿನ ಮುಂದಿನ ತನಿಖೆಗೆ

ಬೇಕಾಗುವ ತನಿಖಾ ಸಾಮಾನುಗಳನ್ನು ನಮ್ಮ ಇಲಾಖಾ ವಾಹನದಲ್ಲಿ ಇಟ್ಟು ಕೊಂಡು ಫಿರ್ಯಾದಿ ಮತ್ತು ನೆರಳು ಸಾಕ್ಷಿಗೆ ದ್ವಿಚಕ್ರದಲ್ಲಿ ಮುಂದೆ ಹೋಗುವಂತೆ ತಿಳಿಸಿ ನಾನು ಮತ್ತು ಸಿಬ್ಬಂದಿ ಕಚೇರಿ ಬಳಿ ಹೊರಗೆ ನಿಲ್ಲುತ್ತೇವೆ ಎಂದು ತಿಳಿಸಿ , ಹಣ ವಹಿಸಿಕೊಂಡು ಪಂಚನಾಮೆ ಕೈಗೊಂಡಿದ್ದು ಆ ಕಾಲಕ್ಕೆ ನಡೆದ ಘಟನಾವಳಿಗಳ ಸ್ಥಿರ ಛಾಯಾ ಚಿತ್ರಗಳನ್ನು ಮತ್ತು ವಿಡಿಯೋ ಚಿತ್ರಣವನ್ನು ಪಿ.ಸಿ ಶಫಿಯುದ್ದಿನ್ ರವರಿಂದ ತೆಗೆಯಿಸಿರುತ್ತೇನೆ. ಸಾಕ್ಷಿಗೆ ನಿಪಿ-3 ರಿಂದ 22 ತೋರಿಸಿದ್ದು ಗುರುತಿಸಿರುತ್ತಾರೆ. ಸದರಿ ಹಣ ವಹಿಸಿಕೊಡುವ ಪಂಚನಾಮೆಯನ್ನು ಅದೇ ದಿನ ಬೆಳಗ್ಗೆ 11-00 ಗಂಟೆಯಿಂದ 1-00 ಗಂಟೆಯವರೆಗೆ ನಮ್ಮ ಠಾಣೆ ಯಾದಗಿರ ಕಛೇರಿಯಲ್ಲಿ ನಮ್ಮ ಸಿಬ್ಬಂದಿ ಸಹಾಯದಿಂದ ತಯಾರಿಸಿರುತ್ತೇನೆ. ನಾನು ಮತ್ತು ಪಂಚರು ಸಹಿ ಮಾಡಿದ್ದೇವೆ. ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು ಸಹಿ ಗುರುತಿಸಿದ್ದು ಅನ್ನು ನಿಪಿ-2(ಡಿ) ಅಂತಾ ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ಅನುಮತಿಸಿ ಮುಂದೂಡಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.